**ಸಾಕ್ಷಿಯನ್ನು ದಿಃ *24/06/2024* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
***ಮುಂದುವರೆದ ಪಾಟೀ ಸವಾಲು : ವಾದಿ ಪರ ವಕೀಲರಿಂದ.***

ಬೆಳಗಾವಿ ರಸ್ತೆಯಲ್ಲಿರುವ ಆಸ್ತಿಗೆ ಇತ್ತೀಚಿಗೆ ಒಬ್ಬ ರಫೀಕ ಇವರಿಗೆ 5 ಲಕ್ಷ ಠೇವಣಿ ಮತ್ತು ಮಾಸಿಕ 5 ಸಾವಿರ ರೂಪಾಯಿ ಬಾಡಿಗೆಗೆ ನೀಡಿರುತ್ತಾರೆ ಎಂದರೆ ಸುಳ್ಳು. ಅದೇ ರೀತಿ ಅದೇ ಕಟ್ಟಡದಲ್ಲಿರುವ ವೆಲ್ಡಿಂಗ ಅಂಗಡಿಗೆ ಸುರೇಶ ಇವರಿಗೆ ಇವರಿಗೆ 5 ಲಕ್ಷ ಠೇವಣಿ ಮತ್ತು ಮಾಸಿಕ 5 ಸಾವಿರ ರೂಪಾಯಿ ಬಾಡಿಗೆಗೆ ನೀಡಿರುತ್ತಾರೆ ಎಂದರೆ ಸುಳ್ಳು. ಸದರಿ ಅಂಗಡಿಗಳ ಬಾಡಿಗೆಯನ್ನು ನ್ಯಾಯಾಲಯದ ಪರವಾನಿಗೆ ಇಲ್ಲದೇ ನಾವೇ ಬಾಡಿಗೆಗೆ ಕೊಟ್ಟು ಬಾಡಿಗೆ ಹಣವನ್ನು ನಾವೇ ನಮ್ಮ ಸ್ವಂತಕ್ಕೆ ಬಳಸಿಕೊಳ್ಳುತ್ತಿದ್ದೇವೆ ಎಂದರೆ ಸರಿಯಲ್ಲ. ಅದೇ ರೀತಿ ದುರ್ಗಾದೇವಿ ದೇವಾಲಯದ ಹಿಂದೆ ಇರುವ ಅಂಗಡಿಗಳ ಬಾಡಿಗೆಯನ್ನು ನ್ಯಾಯಾಲಯದ ಪರವಾನಿಗೆ ಇಲ್ಲದೇ ನಾವೇ ಬಾಡಿಗೆಗೆ ಕೊಟ್ಟು ಬಾಡಿಗೆ ಹಣವನ್ನು ನಾವೇ ನಮ್ಮ ಸ್ವಂತಕ್ಕೆ ಬಳಸಿಕೊಳ್ಳುತ್ತಿದ್ದೇವೆ ಎಂದರೆ ಸರಿಯಲ್ಲ. ಸದರಿ ಎಲ್ಲ ಕಟ್ಟಡಗಳ ಮಹಾನಗರ ಪಾಲಿಕೆಯ ತೆರಿಗೆಯನ್ನು ಕಟ್ಟದೆ, ಮಾನ್ಯ ಉಚ್ಛ ನ್ಯಾಯಾಲಯದ ಮತ್ತು ಈ ನ್ಯಾಯಾಲಯದ ಆದೇಶಗಳನ್ನು ಮೀರಿ, ಪರವಾನಿಗೆ ಇಲ್ಲದೆ ಬಾಡಿಗೆ ಹಣವನ್ನು ಸಂದಾಯ ಮಾಡಿಕೊಂಡು ನಮ್ಮ ಸ್ವಂತಕ್ಕೆ ಬಳಸಿಕೊಳ್ಳುತ್ತಿದ್ದೇವೆ ಎಂದರೆ ಸರಿಯಲ್ಲ.

ಇಬ್ಬರೂ ವಾದಿಯರು ಎಲ್ಲ ಆಸ್ತಿಗಳನ್ನು ದೇಖರೇಕಿ ಮಾಡಲು ತಮ್ಮ ಅಧಿಕಾರವನ್ನು ಮೊಕ್ತಿಯಾರ ನಾಮೆಯ ಮುಖಾಂತರ ನನ್ನ ತಂದೆಯಾದ ಪ್ರತಿವಾದಿ ನಂ.9 ಮತ್ತು ಒಬ್ಬ ವಾಸುದೇವರಾವ ಅಂದರೆ ಪ್ರತಿವಾದಿ ನಂ.13 ಇವರಿಗೆ ನೀಡಿರುತ್ತಾರೆ ಎಂದರೆ ಸಾಕ್ಷಿದಾರರು ನನ್ನ ತಂದೆಗೆ ನೀಡಿಲ್ಲ ಪ್ರತಿವಾದಿ ನಂ.13 ಇವರಿಗೆ ಮಾತ್ರ ನೀಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಈ ವಿಷಯ ಸಂಗತಿ ನನಗೆ ಗೊತ್ತಿದ್ದರೂ ಸಹ ನನ್ನ ತಂದೆಗೆ ಮೊಕ್ತಿಯಾರ ನಾವೆ ನೀಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮೊಕ್ತಿಯಾರ ನಾಮೆಯನ್ನು ಪ್ರಸ್ತುತ ದಾವೆ ಹೂಡುವುದಕ್ಕಿಂತ ಮುಂಚೆ ಜಿ.ಹೆಚ್.ಕಲಘಟಗಿ ಎನ್ನುವ ವಕೀಲರ ಮುಖಾಂತರ ರದ್ದುಪಡಿಸಿದ್ದು, ಅದಕ್ಕೆ ಸಂಬಂಧಪಟ್ಟಿರುವ ಪತ್ರಿಕಾ ಪ್ರಕಟಣೆ ಸದರಿ ಕಡತದಲ್ಲಿ ಹಾಜರುಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಮತ್ತು ಪ್ರತಿವಾದಿ ನಂ.13 ಮೊಕ್ತಿಯಾರ ನಾಮೆ ದುರುಪಯೋಗ ಮಾಡಿಕೊಂಡು ಆಸ್ತಿಗಳನ್ನು ನೋಡಿಕೊಳ್ಳಲಾಗದ ಕಾರಣ ಪತ್ರಿಕಾ ಪ್ರಕಟಣೆ ಮೂಲಕ ಸದರಿ ಮೊಕ್ತಿಯಾರ ನಾಮೆ ಹಿಂಪಡೆದಿದ್ದಾರೆ

ಎಂದರೆ ನನಗೆ ಗೊತ್ತಿಲ್ಲ. ಸದರಿ ಮೊಕ್ತಿಯಾರ ನಾಮೆ ರದ್ದು ಪಡಿಸಿದ ನಂತರ ಪ್ರಸ್ತುತ ಪ್ರಕಟಣೆ ಹೂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿ ನಂ.13 ವಾಸುದೇವ ರೇಗೆ ಇವರು ಪ್ರಸ್ತುತ ದಾವೆ ಚಾಲ್ತಿಯಲ್ಲಿದ್ದಾಗ ತೀರಿಹೋಗಿರುತ್ತಾರೆ. ಅವರ ಪತ್ನಿ ವಸುಧಾ ಸಹ ತೀರಿಹೋಗಿರುತ್ತಾರೆ. ಅವರಿಗೆ ಮಕ್ಕಳು ಇಲ್ಲ. ಸದರಿಯವರು ತಮ್ಮ ಜೀವಿತಾವಧಿಯಲ್ಲಿ ಒಂದು ನೊಂದಾಯಿತ ಮೃತ್ಯುಪತ್ರ ಮಾಡಿದ್ದಾರೆ ಎಂದು ವಾದಿ ನಂ.2 ಇವರು ಹೇಳುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಾಸುದೇವ ತೀರಿಹೋದಾಗ ಅವರಿಗೆ 84 ವರ್ಷ ವಯಸ್ಸು ಎಂದರೆ ನನಗೆ ಗೊತ್ತಿಲ್ಲ. ಸದರಿಯವರು ಹಾಸಿಗೆ ಹಿಡಿದು ತೀರಿಹೋಗಿರುತ್ತಾರೆ. ಸದರಿಯವರು ಒಂದು ತಿಂಗಳ ಕಾಲ ಎಸಡಿಎಂ ಆಸ್ಪತ್ರೆಯಲ್ಲಿ ದಾಖಲಾಗಿದ್ದರು ಎಂದರೆ ಸಾಕ್ಷಿದಾರರು ಒಂದು ತಿಂಗಳ ಅವಧಿಗೆ ಅಲ್ಲ ಯಾವಾಗಲೂ ಸಹ ದಾಖಲಾಗಿ ಮತ್ತೆ ಮನೆಗೆ ಕರೆದುಕೊಂಡು ಬರುತ್ತಿದ್ದೇವು ಎಂದು ಉತ್ತರಿಸುತ್ತಾರೆ. ಈ ರೀತಿ ಅವರನ್ನು ಗೀತೇಶ ಮತ್ತು ಮಂದಾರ ಇವರು ನೋಡಿಕೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿಯವರಿಗೆ ಹುಷಾರವಿಲ್ಲದ ಕಾರಣ ಮಾನಸಿಕ ಅಸ್ಥವ್ಯಸ್ತೆ ಮತ್ತು ಅರುಮರು ಇತ್ತು ಎಂದರೆ ನನಗೆ ಗೊತ್ತಿಲ್ಲ. ಅರವಿಂದ, ಗೀತೇಶ ಮತ್ತು ಮಂದಾರ ಇವರು ಕೂಡಿಕೊಂಡು ಸದರಿ ವಾಸುದೇವ ಇವರ ಅಸ್ವಸ್ಥತೆಯನ್ನು ದುರುಪಯೋಗಪಡಿಸಿಕೊಂಡು ಖೊಟ್ಟಿಯಾಗಿ ಮೃತ್ಯುಪತ್ರ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ತಂದೆಗೆ ಆರು ಜನ ಸಹೋದರಿಯರು. ನನ್ನ ತಂದೆ ಮತ್ತು ಅವರ ಸಹೋದರರು ಅವರ ಅಕ್ಕತಂಗಿಯರಿಗೆ ಬಂಗಾರ ಮತ್ತು ಹಣವನ್ನು ಅವರ ಆಸ್ತಿಯ ಪಾಲಿನ ಬದಲಾಗಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿಯವರು ಈ ರೀತಿ ತಮ್ಮ ಪಾಲಿನ ಅಸ್ತಿ ಬಂಗಾರದ ಪಡೆದುಕೊಂಡಿರುವ ಕಾರಣ ಮತ್ತು ದಾವಾದಾಸ್ತಿಗಳಲ್ಲಿ ಯಾವುದೇ ಹಿತಾಸಕ್ತಿ ಇಲ್ಲದ ಕಾರಣ ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಮಾಡಬೇಕು ಎಂದು ಹೇಳುತ್ತಾರೆ. ಅದೇ ರೀತಿ ನಮ್ಮ ಪ್ರತಿವಾದ ಪತ್ರದಲ್ಲಿ ಬರೆದಿರುವ ಹಾಗೇ ರತ್ನಾಕರ ಬ್ಯಾಂಕ, ಮಹಾಲಕ್ಷ್ಮಿ ಕೋ-ಆಫ್ ಬ್ಯಾಂಕ, ಆರ್ಯವೈಶ್ಯ ಬ್ಯಾಂಕ ಇವುಗಳು ಅವಶ್ಯಕ ಪಕ್ಷಗಾರರು ಎಂದು ತಪ್ಪಾಗಿ ಬರೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಬ್ಯಾಂಕಗಳು ಅವಶ್ಯಕ ಪಕ್ಷಗಾರರು ಮಾಡಬೇಕಾದ ಕಾರಣವೆನೆಂದರೆ ಸದರಿ ವಾಸುದೇವ ರೇಗೆ ಇವರು ಬಾಡಿಗೆ ಸಂದಾಯ

ಹಣವನ್ನು ಮೇಲಿನ ಹೇಳಿರುವ ಬ್ಯಾಂಕಗಳಲ್ಲಿ ಮತ್ತು ಕೆನರಾ ಬ್ಯಾಂಕಗಳಲ್ಲಿ ಇಟ್ಟುಕೊಂಡಿರುವ ಕಾರಣ ಸದರಿ ಬ್ಯಾಂಕುಗಳ ಸಹ ಅವಶ್ಯಕ ಪಕ್ಷಗಾರರು ಇರುತ್ತಾರೆ ಎಂದು ಉತ್ತರಿಸಿರುತ್ತಾರೆ. ಇದಕ್ಕೆ ಪೂರಕವಾಗಿ ಬ್ಯಾಂಕ ದಾಖಲೆ ನಾನು ಹಾಜರುಪಡಿಸಿರಬಹುದು. ಈ ಹೇಳಿಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ದೊಡ್ಡಪನಾದ ವಾಸುದೇವ ಇವರು ಸದರಿ ಬ್ಯಾಂಕುಗಳ ಮೂಲಕ ಯಾವುದೇ ಬಾಡಿಗೆ ವ್ಯವಹಾರ ಮಾಡಿಲ್ಲ ಮತ್ತು ನನ್ನ ಸೋದರಅತ್ತೆಗಳು ಸಹ ಅವಶ್ಯಕ ಪಕ್ಷಗಾರರು ಆಗುವುದಿಲ್ಲ ಎಂದರೆ ಸರಿಯಲ್ಲ.

ನನ್ನ ಪ್ರತಿವಾದ ಪತ್ರದಲ್ಲಿ ಬರೆದುಕೊಂಡ ಹಾಗೇ ಪ್ರತಿವಾದಿ ನಂ.13 ವಾಸುದೇವ ರೇಗೆ ಇವರು ಬಾಡಿಗೆ ಹಣ ಸಂದಾಯ ಮಾಡಿ ಬ್ಯಾಂಕುಗಳಲ್ಲಿ ಇಟ್ಟಿರುವ ಕುರಿತು ದಾಖಲೆಗಳನ್ನು ಸಲ್ಲಿಸಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ಕೊಟ್ಟಿರಬಹುದು ಎಂದು ಉತ್ತರಿಸುತ್ತಾರೆ. ಯಾವುದೇ ದಾಖಲೆಗಳನ್ನು ಕೊಡದೇಯಿದ್ದರೂ ಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ರೀತಿ ಇರುವಾಗ ನಿಮ್ಮ ಪ್ರಕಾರ ಸದರಿ ವಾಸುದೇವ ಇವರು ಎಷ್ಟು ವರ್ಷಗಳ ಕಾಲ ಬಾಡಿಗೆ ಸಂದಾಯ ಮಾಡಿದರು ಎಂಬ ಪ್ರಶ್ನೆಗೆ ಸಾಕ್ಷಿದಾರರು ಸುಮಾರು 1973 ರಿಂದ 2005 ರವರೆಗೆ ಬಾಡಿಗೆ ಸಂದಾಯ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ.

ನನ್ನ ಪ್ರತಿವಾದ ಪತ್ರದಲ್ಲಿ ಸದರಿ ವಾಸುದೇವ ಇವರು ಬಾಡಿಗೆ ಸಂದಾಯ ಹಣವನ್ನು ತಮ್ಮ ಸ್ವಂತಕ್ಕೆ ಬಳಸಿಕೊಂಡಿರುವ ಕುರಿತು ಯಾವುದಾದರೂ ಕ್ರಮ ಕೈಗೊಂಡಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ಸದರಿ ವಿಷಯ 2006 ನೇ ಇಸ್ವಿಯಲ್ಲಿ ಗೊತ್ತಾಯಿತು ಆದ್ದರಿಂದ ಈ ದಾವೆ ಹೂಡಿರುತ್ತೇವೆ ಎಂದು ಉತ್ತರಿಸುತ್ತಾರೆ. ನನ್ನ ತಂದೆಯಾದ ಜಗದೀಶ ರೇಗೆ ಇವರು ಬಾಡಿಗೆ ಹಣವನ್ನು ಸಂದಾಯ ಮಾಡುತ್ತಿದ್ದು ಸದರಿ ಹಣ ತಾವೇ ಸ್ವಂತಕ್ಕೆ ಬಳಸಿಕೊಂಡಿದ್ದಾರೆ ಹೊರತು ವಾಸುದೇವ ರೇಗೆ ಅವರು ಅಲ್ಲ ಎಂದರೆ ಸರಿಯಲ್ಲ. ಈ ರೀತಿ ಬಾಡಿಗೆ ಸಂದಾಯದ ಹಣವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ವಾಸುದೇವ ರೇಗೆ ಇವರನ್ನು ಅವಮಾನ ಮಾಡಬೇಕೆನ್ನುವ ದುರುದ್ದೇಶದಿಂದ ನಾನು ಅವರ ವಿರುದ್ದ ಈ ರೀತಿ ಪ್ರತಿಪಾದಿಸಿದ್ದೇನೆ ಎಂದರೆ ಸರಿಯಲ್ಲ. ಈ ಆಪಾದನೆ ಕುರಿತು ನಿಜಾಂಶ ಕಂಡುಕೊಳ್ಳಲು ಹಿರಿಯರನ್ನು ಕೂಡಿಸಿಲ್ಲ.

ಮಾಧವರಾವ ಇವರು 1947 ರಲ್ಲಿ ಮತ್ತು ಶಂಕರರಾವ ಇವರು 1973 ರಲ್ಲಿ ತೀರಿಹೋಗಿದ್ದಾರೆ ಎಂದರೆ ಇರಬಹುದು. ಮಾಧವರಾವ ಇವರು ತೀರಿಹೋದ ಮೇಲೆ ಶಂಕರರಾವ ಇವರು ಆಸ್ತಿಗಳಲ್ಲಿ ತಮ್ಮ ಮತ್ತು ತಮ್ಮ ಮಕ್ಕಳ ಹೆಸರುಗಳನ್ನು ದಾಖಲಿಸಿಕೊಂಡಿದ್ದಾರೆ ಎಂದರೆ ನಿಜ. ಈ ರೀತಿ 1947 ರ ನಂತರ ಸದರಿ ಶಂಕರರಾವ ಮತ್ತು ಅವರ ಮಕ್ಕಳ ಹೆಸರು ದಾಖಲಾಗಿರುವ ಕುರಿತು ನಾವು ಪ್ರಸ್ತುತ ದಾವೆ ಮಾತ್ರ ತಕರಾರು ಮಾಡಿರುತ್ತೇವೆ. ಅವರ ಹೆಸರುಗಳನ್ನು ಪ್ರಶ್ನಿಸಿ ಈ ದಾವೆ ಹೊರತುಪಡಿಸಿ ಬೇರೆ ಯಾವುದೇ ವಿಧಾನದಲ್ಲಿ ಪ್ರಶ್ನಿಸಿಲ್ಲ. ಈ ಆಸ್ತಿಗಳು ಎಲ್ಲವೂ ಮಾಧವರಾವ ಮತ ಶಂಕರರಾವ ಇವರ ಒಟ್ಟು ಕುಟುಂಬದ ಆಸ್ತಿಗಳು ಎಂದು ಗೊತ್ತಿದ್ದು, ನಾವು ಇಲ್ಲಿಯವರೆಗೂ ಅವರ ಹೆಸರಿನ ದಾಖಲಾತಿಗಳನ್ನು ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ.

ನನ್ನ ಪ್ರತಿವಾದ ಪತ್ರದಲ್ಲಿ ಮಾಧವರಾವ ಇವರ ಹಣದಿಂದ ಶಂಕರರಾವ ಇವರು ಎರಡು ಆಸ್ತಿ ಖರೀದಿ ಮಾಡಿದ್ದರು ಎಂದು ಹೇಳಿರುವ ಸಂಗತಿ ನಿಜವಿರುತ್ತದೆ. ಈ ಹೇಳಿಕೆಗೆ ಪೂರಕವಾಗಿ ದಾಖಲಾತಿ ಇದೇಯಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ಅವರುಗಳ ಬ್ಯಾಂಕ ಬ್ಯಾಲೆನ್ಸ ಅದಕ್ಕೆ ಆಧಾರ ಎಂದು ಉತ್ತರಿಸುತ್ತಾರೆ. ಈ ರೀತಿ ಇರುವಾಗ 1947 ರಲ್ಲಿ ಮಾಧವರಾವ ಇವರಿಗೆ ಯಾವ ಬ್ಯಾಂಕಿನಲ್ಲಿ ಖಾತೆ ಇತ್ತು ಮತ್ತು ಅವರ ಹತ್ತಿರ ಎಷ್ಟು ಹಣವಿತ್ತು ಎಂದರೆ ಸಾಕ್ಷಿದಾರರು ನೆನಪಿಲ್ಲ ಆದರೆ ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ ಎಂದು ಉತ್ತರಿಸುತ್ತಾರೆ. ಈ ಕುರಿತು ಯಾವುದೇ ದಾಖಲಾತಿಗಳನ್ನು ಕೊಡದೇಯಿದ್ದರೂ ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಕೆಲವೊಂದು ಆಸ್ತಿಗಳು ಮಾಧವರಾವ ಇವರ ಸ್ವಯಾರ್ಜಿತ ಆಸ್ತಿಗಳು ಎಂದು ಬರೆದುಕೊಂಡಿದ್ದು ಸಹ ಆಧಾರರಹಿತ ಪ್ರತಿಪಾದನೆ ಎಂದರೆ ಸರಿಯಲ್ಲ. ಈ ಕುರಿತು ಯಾವ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿದಾರರು ಮಾಡಿದ್ದೇವೆ ಎಂದು ಉತ್ತರಿಸುತ್ತಾರೆ.

ಪ್ರತಿವಾದಿ ನಂ.32 ರಿಂದ 34 ಇವರು ವಾಸುದೇವ ರೇಗೆ ಇವರಿಂದ ಅಂಗಡಿಗಳನ್ನು ಖರೀದಿ ಮಾಡಿರುತ್ತಾರೆ ಎಂದರೆ ನಿಜ. ಈ ಕುರಿತು ಖರೀದಿ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಈ ರೀತಿ ಅವರು ಎಷ್ಟು ಪ್ರತಿಫಲಕ್ಕೆ ಮಾರಾಟ ಮಾಡಿರುತ್ತಾರೆ ಮತ್ತು ಆ ಹಣವನ್ನು ಏನೂ ಮಾಡಿರುತ್ತಾರೆ

ಎಂದು ನನಗೆ ಗೊತ್ತಿಲ್ಲ. ವಾದಿಯ ಪ್ರಕಾರ ಸದರಿ ಅಂಗಡಿಗಳನ್ನು ಜಗದೀಶ ರೇಗೆ ಇವರು ಮಾರಾಟ ಮಾಡಿದ್ದು ಈ ರೀತಿ ಬಂದ 5 ಲಕ್ಷ ರೂಪಾಯಿ ಪ್ರತಿಫಲವನ್ನು ತಾವೇ ಬಳಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ರೀತಿ ಮಾರಾಟ ಮಾಡಿ ಎಷ್ಟು ವರ್ಷಗಳ ಕಾಲವಾಗಿದೆ ಎಂದು ನನಗೆ ಹೇಳಲು ಬರುವುದಿಲ್ಲ.

ಕರ್ನಾಟಕ ಬ್ಯಾಂಕನಲ್ಲಿ ಎಷ್ಟು ಸಾಲವಿದೆ ಎಂದು ನನಗೆ ಸದ್ಯಕ್ಕೆ ನೆನಪಿಲ್ಲ. ಸದ್ಯಕ್ಕೆ ಸದರಿ ಸಾಲ 3 ಕೋಟಿ ರೂಪಾಯಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದಿಯ ಪ್ರಕಾರ ನನ್ನ ತಂದೆ ಸದರಿ ಸಾಲವನ್ನು ಮಾಡಿ ಯಾವುದೇ ಮರುಪಾವತಿ ಮಾಡದೇ ತೀರಿಹೋಗಿರುತ್ತಾರೆ ಎಂದರೆ ಸಾಕ್ಷಿದಾರರು ನನ್ನ ತಂದೆಯನ್ನು ಸಾಲವನ್ನು ತೆಗೆದಿಲ್ಲ ಆದರೆ ಮರುಪಾವತಿ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಈ ಸಾಲದ ಕುರಿತು ನನ್ನ ತಂದೆಗೆ ಬ್ಯಾಂಕಿನವರು ನೋಟೀಸು ಸಹ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮರುಪಾವತಿ ಕುರಿತು ದಾವೆ ಸಹ ಹೂಡಿರುತ್ತಾರೆ ಎಂದರೆ ನಿಜ, ಆದರೆ ಯಾರ ವಿರುದ್ದ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ವಾದಿಯರು ನನ್ನ ತಂದೆಯನ್ನು ಸಾಲವನ್ನು ಮರುಪಾವತಿ ಮಾಡಬೇಕೆಂದು ಎಷ್ಟು ಬಾರಿ ಕೇಳಿಕೊಂಡರು ಸಹ ಅವರಿಗೆ ತೊಂದರೆ ಕೊಡಬೇಕು ಎಂದು ಸಾಲವನ್ನು ಮರುಪಾವತಿ ಮಾಡಿಲ್ಲ ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ. ಅದೇ ರೀತಿ ನಮ್ಮ ಮನೆಯಲ್ಲಿದ್ದ ಕಾರು ಮತ್ತು ಇತರೇ ವಸ್ತುಗಳನ್ನು ಮಾರಾಟ ಮಾಡಿ ಅವುಗಳ ಹಣವನ್ನು ಸಹ ನನ್ನ ತಂದೆ ದುರ್ಬಳಕೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಪೈ ಹೌಸ ನಮ್ಮ ಮನೆತನಕ್ಕೆ ಹೇಗೆ ಬಂತು ಎಂಬ ಪ್ರಶ್ನೆಗೆ ಸಾಕ್ಷಿದಾರರು ನನ್ನ ತಂದೆ ಅವರ ಸ್ವಂತ ಆದಾಯದಿಂದ ಖರೀದಿ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಯಾವ ಇಸ್ವಿಯಲ್ಲಿ ಮತ್ತು ಎಷ್ಟು ಪ್ರತಿಫಲಕ್ಕೆ ಖರೀದಿ ಮಾಡಿದ್ದಾರೆ ಎಂದು ನನಗೆ ನೆನಪಿಲ್ಲ. ಸದರಿ ಆಸ್ತಿ ದಾವಾದಾಸ್ತಿ ಇರುವುದಿಲ್ಲ ಮತ್ತು ಅದರ ನಂಬರಗಳು ನನಗೆ ಹೇಳಲು ಬರುವುದಿಲ್ಲ. ಈ ರೀತಿ ನನ್ನ ತಂದೆ ಸ್ವಯಾರ್ಜಿತ ಆಸ್ತಿ ಎಂದು ಹೇಳಿದಕ್ಕೆ ಯಾವುದೇ ದಾಖಲೆ ಸಲ್ಲಿಸಿಲ್ಲ. ಆದ್ದರಿಂದ ಸದರಿ ಆಸ್ತಿ ಒಟ್ಟು ಕುಟುಂಬದ ಆಸ್ತಿ ಇದ್ದರೂ ಸಹ ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವಾಸುದೇವ ರೇಗೆ ಮತ್ತು ಅವರ ಪತ್ನಿ ಮಕ್ಕಳು ಇಲ್ಲದೇ ತೀರಿಹೋದ ಮೇಲೆ ಅವರ ಲಾಕರನಲ್ಲಿದ್ದ 25 ಲಕ್ಷ ಮೌಲ್ಯದ ಬಂಗಾರ ಮತ್ತು 25 ಲಕ್ಷ ಹಣವನ್ನು ನಾವೇ ಮೋಸತನದಿಂದ ತೆಗೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ಅದೇ ರೀತಿ ಅವರ ಹೆಸರಿನಲ್ಲಿರುವ ಮುದ್ದತ್ತು ಠೇವಣಿಗಳನ್ನು ಸಹ ನಾವೇ ಮೋಸತನದಿಂದ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಈ ರೀತಿ ಮೋಸದಿಂದ ಹಣವನ್ನು ಪಡೆದುಕೊಂಡಿದಕ್ಕೆ ದೀಪಕ ರೇಗೆ ಇವರು 3 ನೇ ಹೆಚ್ಚುವರಿ ದಿವಾಣಿ ನ್ಯಾಯಾಲಯದಲ್ಲಿ ಖಾಸಗಿ ದೂರನ್ನು ಸಹ ಸಲ್ಲಿಸಿದ್ದು, ಸದರಿ ದೂರು ಇನ್ನೂ ಚಾಲ್ತಿಯಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ದೊಡ್ಡಪ್ಪ ವಾಸುದೇವ ಇವರು ತೀರಿಹೋದ ಮೇಲೆ ಅವರ ಪತ್ನಿ ವಸುಧಾ ಇವರು ತೀರಿಹೋಗುವವರು ನಮ್ಮ ಜೊತೆಗೆ ವಾಸವಿದ್ದರು ಎಂದರೆ ನಿಜ. ಅವರ ಮಾನಸಿಕ ಸ್ಥಿತಿ ಚೆನ್ನಾಗಿರಲಿಲ್ಲ ಎಂದರೆ ಸರಿಯಲ್ಲ, ಆದರೆ ಕೆಲವೊಂದು ಬಾರಿ ಅರುಮರದೊಂದಿಗೆ ವ್ಯವಹರಿಸುತ್ತಿದ್ದರು ಎಂದು ಹೇಳುತ್ತಾರೆ. ಸದರಿಯವರು ವ್ಯವಹಾರಗಳನ್ನು ನಿಭಾಯಿಸುವ ಸ್ಥಿತಿಯಲ್ಲಿರಲಿಲ್ಲ ಎಂದರೆ ಸರಿಯಲ್ಲ. ಅವರ ಜೀವಿತಾವಧಿಯಲ್ಲಿ ವಾಸುದೇವ ಮತ್ತು ವಸುಧಾ ಇವರನ್ನು ನಾವು ಹಿಂಸಿಸಿದ್ದೇವೆ ಎಂದರೆ ಸರಿಯಲ್ಲ. ಈ ರೀತಿ ಎಲ್ಲರಿಗೆ ಅನ್ಯಾಯ ಮಾಡಿ ವಾದಿಯರಿಗೆ ಬರುವ ಹಿಸ್ಸೆಯನ್ನು ಕೊಡುತ್ತಿಲ್ಲ ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ. ಈ ರೀತಿ ಇದ್ದರೂ ಸಹ ನನ್ನ ಸುಳ್ಳು ಪ್ರತಿವಾದ ಪತ್ರದ ಮೂಲಕ, ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಅದರಂತೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಸೂಚಿಸುವ ನಿಮ್ಮ ಎಲ್ಲ ಸಲಹೆಗಳು ಸರಿಯಲ್ಲ.

***ಪಾಟೀ ಸವಾಲು : ವಾದಿ ನಂ.2 ರ ಪರ ವಕೀಲರು ಹಾಜರಿದ್ದು, ಸಮಯಕೋರಿದ ಕಾರಣ, ಯಾವುದೇ ರೀತಿಯ ಸಮಂಜಸವಾದ ಕಾರಣವಿಲ್ಲದೆಯಿದ್ದರೂ ಸಹ ನ್ಯಾಯತಾ ದೃಷ್ಟಿಯಿಂದ ಅಂತಿಮವಾಗಿ ಕಾಲಾವಕಾಶ ನೀಡಿ ಪಾಟೀ ಸವಾಲು ಮುಂದೂಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,

ಧಾರವಾಡ.